**ಪಾಠ-4** **ಜುಲೈ 17-23**

# ವಿಶ್ರಾಂತಿಯ ಬೆಲೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** 2 ಸಮು 11:1-27, 2 ಸಮು 12:1-23, ಆ.ಕಾಂಡ 3:1-8, 1 ಯೋಹಾನ 1:9.

**ಸ್ಮರಣವಾಕ್ಯ : "ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು; ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನ ಪಡಿಸು"** (ಕೀರ್ತ 51:10).

ಅನೇಕ ಜನರು ಯಾವುದೇ ಸದ್ದುಗದ್ದಲವಿಲ್ಲದೆ ಕೊಂಚ ವಿಶ್ರಾಂತಿಯನ್ನು ಕಂಡುಕೊಳ್ಳುವುದಕ್ಕೆ ಹತಾಶರಾಗಿ ಬಿಡುತ್ತಾರೆ. ಅದಕ್ಕಾಗಿ ಅವರು ಹಣವನ್ನು ವ್ಯಯಮಾಡಲು ಸಹಾ ಸಿದ್ಧರಾಗಿರುತ್ತಾರೆ. ಅನೇಕ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅಂತರ್ಜಾಲ ಮುಕ್ತ ಕೋಣೆಗಳಿರುತ್ತವೆ, ಅವುಗಳನ್ನು ಗಂಟೆಯ ಲೆಕ್ಕಕ್ಕೆ ಬಾಡಿಗೆ ತೆಗೆದುಕೊಳ್ಳಬಹುದು. ಅಲ್ಲಿ ನಿಯಮಗಳು ಬಹಳ ಕಟ್ಟುನಿಟ್ಟು ಗದ್ದಲವಿಲ್ಲ, ಸಂದರ್ಶಕರಿಲ್ಲ. ಜನರು ಸುಮ್ಮನೆ ಮೌನವಾಗಿ ಕುಳಿತು ಇಲ್ಲವೇ ಸುಮ್ಮನೆ ಆಲೋಚಿಸುತ್ತಾ, ಮಂಪರಿನಲ್ಲಿ ಇರುವುದಕ್ಕೆ ಇಷ್ಟುಪಡುತ್ತಾರೆ. ವಿಮಾನ ನಿಲ್ದಾಣಗಳಲ್ಲಿ ನಿದ್ರಾಸೀನಗಳು ಸಿಗುತ್ತವೆ ಅವುಗಳನ್ನು ಬಾಡಿಗೆಗೆ ಪಡೆದು ಉಪಯೋಗಿಸಬಹುದು. ಗದ್ದಲ ತಗ್ಗಿಸುವ ಶ್ರವಣಯಂತ್ರಗಳು ಬಹಳ ಜನಪ್ರಿಯ ಉಪಕರಣಗಳಾಗಿವೆ. ನೀವು ನಿಮ್ಮ ಕೆಲಸದಲ್ಲಿ ತೊಡಗಿರುವಾಗ ತಕ್ಷಣ ಕೆಲಸವನ್ನು ತೊರೆದು ನಿಮ್ಮ ತಲೆ ಮತ್ತು ದೇಹಗಳನ್ನು ಮುಚ್ಚಿಕೊಂಡು ವಿರಮಿಸಿಕೊಳ್ಳಬಹುದಾದ "**ಕುಸಿಯುವ ಗುಡಾರಗಳು**" ಸಹಾ ಸಿಗುತವೆ (ಕ್ಯಾನ್ವಸ್ ಹುಡ್ಸ್).

* **ಈ ಪಾಠವನ್ನು ಜುಲೈ 24ರ ಸಬ್ಬತ್ತಿಗೆ ಸಿದ್ಧಪಡಿಸಲಾಗಿದೆ.**

ವಿಶ್ರಾಂತಿ ಎಂಬುದಕ್ಕೂ ಬೆಲೆ ತೆರಬೇಕು. ದೂರದರ್ಶನ, ಅಂತರ್ಜಾಲ ಮುಂತಾದ ಮಾಧ್ಯಮ ಸಲಹೆಗಾರರು ಜನರಿಗೆ ನಿಮ್ಮ ಉದ್ಧಾರವು ನಿಮ್ಮ ಕೈಯಲ್ಲೇ ಇದೆ, ವಿಶ್ರಾಂತಿಯೆಂಬುದು ಸರಿಯಾದ ಯೋಜನೆಯ ಮತ್ತು ಆಯ್ಕೆಯ ವಿಷಯವೆಂದು ನಂಬಿಸುತ್ತಾರೆ. ನಾವು ಅವರ ಸಲಹೆ ಸೂಚನೆಗಳನ್ನು ಪ್ರಾಮಾಣಿಕವಾಗಿ ತೆಗೆದುಕೊಂಡರೂ ಕಡೆಗೆ ನಮ್ಮ ಹೃದಯಕ್ಕೆ ಬೇಕಾದ ಸಮಾಧಾನ ಸಿಗುವುದಿಲ್ಲವೆಂಬುದರ ಅರಿವಾಗುತ್ತದೆ. ನಾಲ್ಕನೆ ಶತಮಾನದಲ್ಲಿಯೆ ಆಗಸ್ಟಿನ್ ತತ್ವಜ್ಞಾನಿಯು 'ತಪ್ಪೊಪ್ಪಿಗೆಗಳು' ಎಂಬ ತನ್ನ ಪ್ರಸಿದ್ಧ ಕೃತಿಯಲ್ಲಿ ಬಹಳ ಅರ್ಥಗರ್ಭಿತವಾಗಿ ದೇವರ ಕೃಪೆಯನ್ನು ಪರಿಗಣಿಸಿದವನಾಗಿ ಹೀಗೆ ಹೇಳುತ್ತಾನೆ: "ದೇವರೇ ನಮ್ಮನ್ನು ನೀನು ನಿನ್ನಿಷ್ಟಕ್ಕೆ ಮಾಡಿದ್ದೀಯೆ, ನಮ್ಮ ಹೃದಯಗಳಲ್ಲಿ ಸಮಾಧಾನವಿಲ್ಲ, ಅದನ್ನು ನಾವು ನಿನ್ನಲ್ಲಿ ಮಾತ್ರ ಕಂಡುಕೊಳ್ಳಬಹುದು" ಈ ವಾರ ನಾವು "ತನ್ನ ಹೃದಯಕ್ಕೆ ಹತ್ತಿರದವನು" ಎಂದು ದೇವರು ಹೇಳಿಕೊಂಡ ವ್ಯಕ್ತಿಯ ಹೇಗೆ ದೇವರ ವಿಶ್ರಾಂತಿಯ ನಿಜವಾದ ಬೆಲೆಯನ್ನು ಕಂಡುಕೊಂಡನು ಎಂಬುದನ್ನು ಸಂಕ್ಷಿಪ್ತವಾಗಿ ಕಲಿಯುತ್ತೇವೆ.

**ಭಾನುವಾರ** **ಜುಲೈ 18**

## ಬಳಲಿಕೆ ಮತ್ತು ಬಾಡುವಿಕೆ

ವಸಂತಕಾಲದಲ್ಲಿ ಒಂದು ಸಂಜೆ ಅರಸನಾದ ದಾವೀದನು ಚಿಂತಾಕ್ರಾಂತನಾಗಿ ತನ್ನ ಅರಮನೆಯ ಮಾಳಿಗೆಗೆ ಬಂದನು. ಆತನು ಆವಾಗ ಯೋರ್ದನ್ ಸೀಮೆಯಲ್ಲಿ ಮತ್ತೊಂದು ಕಡೆ ತನ್ನ ಸೈನ್ಯದಲ್ಲಿ ಇದ್ದುಕೊಂಡು ಯುದ್ಧವನ್ನು ನಡೆಸಬೇಕಾಗಿತ್ತು. ಆತನು ದೇವಜನರು ಅಮ್ಮೋನಿಯರಿಗೆ ವಿರುದ್ಧವಾಗಿ ಹೋರಾಡಿ ಜಯ ಹೊಂದುವಂತೆ ಮಾಡಿ ಅಂತಿಮವಾಗಿ ರಾಜ್ಯದಲ್ಲಿ ಶಾಂತಿಸಮಾಧಾನವನ್ನು ಸ್ಥಾಪಿಸಬೇಕಾಗಿತ್ತು.

2 ಸಮುವೇಲ 11:1–5 ವಚನಗಳನ್ನು ಓದಿರಿ. ದಾವೀದನು ಯಾವ ಮಹಾಪಾಪವನ್ನು ಎಸಗಿದನು?

ದಾವೀದನು ಬಹಳ ಸುಂದರವಾದ ಒಂದು ಹೆಂಗಸು ಸ್ನಾನ ಮಾಡುವುದನ್ನು ತನ್ನ ಅರಮನೆಯ ಮಾಳಿಗೆಯ ಮೇಲಿಂದ ನೋಡಿದನು. ಆತನ ಪಾಪಸ್ವಭಾವವು ಆ ಸಂಜೆ ಅವನನ್ನು ಉತ್ತೇಜಿಸುವುದರಿಂದ ಆತನು ಬತ್ಷೆಬೆಯ ಜೊತೆಗೆ ವ್ಯಭಿಚಾರ

ಮಾಡಿದನು. ಆಕೆಯು ಅವನ ನಿಷ್ಠಾವಂತ ಸೈನ್ಯಾಧಿಕಾರಿಯ ಹೆಂಡತಿಯಾಗಿದ್ದಳು. ಪುರಾತನಕಾಲದ ಎಲ್ಲಾ ಅರಸಾರುಗಳಂತೆಯೇ ದಾವೀದನೂ ಸಹಾ ಪೂರ್ಣಾಧಿಕಾರ ಹೊಂದಿದವನಾಗಿದ್ದನು. ಅರಸನಾಗಿ ಆತನು ಪ್ರಜೆಗಳಿಗನ್ವಯವಾಗುವ ನಿಯಮಗಳಿಗೆ ಬದ್ಧನಾಗಿರಬೇಕಾಗಿರಲಿಲ್ಲ. ಆದಾಗ್ಯೂ, ದಾವೀದನ ಕುಟುಂಬದ ನಂತರದ ಕಥೆಯು ರಾಜನೂ ಸಹಾ ದೇವರ ಧರ್ಮಶಾಸ್ತ್ರಕ್ಕೆ ಹೆಚ್ಚಲ್ಲ ಎಂಬುದನ್ನು ನಮಗೆ ನೆನಪಿಸುತ್ತದೆ.

ಯಾವಾಗಲೂ ಕಟ್ಟುಪಾಡುಗಳು ಒಂದು ಸಂರಕ್ಷಣೆ, ಭದ್ರತೆಯನ್ನು ಒದಗಿಸುತ್ತವೆ. ರಾಜನೇ ಆದರೂ ಅವುಗಳನ್ನು ಮೀರಿ ನಡೆದಾಗ ಭಯಂಕರವಾದ ಫಲಿತಾಂಶಗಳನ್ನು ಎದುರಿಸಬೇಕಾಗುತ್ತದೆ. ದಾವೀದನು ದೇವರ ಧರ್ಮಶಾಸ್ತ್ರದ ಮಿತಿಯನ್ನು ಮೀರಿದಾಗ ಆತನ ಜೀವಿತದ ಎಲ್ಲಾ ಕ್ಷೇತ್ರದಲ್ಲೂ ಅದರ ಪರಿಣಾಮಗಳನ್ನು ಅನುಭವಿಸತೊಡಗಿದನು. ದಾವೀದನು ಇದನ್ನು ಕೇವಲ ಪ್ರಣಯ ದಾಟ ಯಾರ ಗಮನಕ್ಕೂ ಬರುವುದಿಲ್ಲವೆಂದು ಬಗೆದನು, ಆದರೆ ಬತ್ಶೆಬೆಯು ಬಸುರಾಗಿದ್ದಳು. ಅವಳ ಗಂಡನು ದೂರದಲ್ಲಿದ್ದನು.

2 ಸಮುವೇಲ 11:6–27 ವಚನಗಳನ್ನು ಓದಿರಿ. ದಾವೀದನು ತನ್ನ ಪಾಪವನ್ನು ಮುಚ್ಚಿಕೊಳ್ಳಲು ಹೇಗೆ ಪ್ರಯತ್ನಿಸಿದನು?

ಊರಿಯನು ಮನೆಗೆ ಹೋಗಿ ಉಂಡುಕುಡಿದು ತನ್ನ ಹೆಂಡತಿಯೊಡನೆ ರಾತ್ರಿ ಕಳೆಯಲೆಂದು ದಾವೀದನು ಮಾಡಿದ ಅತಿಸೂಕ್ಷ್ಮದ ಯುಕ್ತಿಯು ವಿಫಲವಾಯ್ತು. ಊರಿಯನು ಒಬ್ಬ ಪ್ರಾಮಾಣಿಕನಾದ ವ್ಯಕ್ತಿಯಾಗಿದ್ದನು. ಆತನು ದಾವೀದನು ನೀಡಿದ ಗುಟ್ಟಿನ ಸಲಹೆಗಳಿಗೆ: "ಒಡಂಬಡಿಕೆಯ ಮಂಜೂಷವೂ ಇಸ್ರಾಯೇಲ್ಯರೂ ಯೆಹೂದ್ಯರೂ ಗುಡಾರಗಳಲ್ಲಿ ವಾಸವಾಗಿದ್ದಾರೆ. ನನ್ನ ಒಡೆಯನಾದ ಯೋವಾಬನೂ ಅವನ ಸೇವಕರೂ ಬೈಲಿನಲ್ಲಿ ಪಾಳೆಯ ಮಾಡಿಕೊಂಡಿದ್ದಾರೆ. ಹೀಗಿರುವಲ್ಲಿ ನಾನು ನನ್ನ ಮನೆಗೆ ಹೋಗಿ ಉಂಡುಕುಡಿದು ಹೆಂಡತಿಯೊಡನೆ ಮಲಗಿಕೊಳ್ಳುವುದು ಹೇಗೆ?" ಎಂದು ಹೇಳುತ್ತಾನೆ (2 ಸಮು 11:11). ಹತಾಶನಾದ ದಾವೀದನು ತನ್ನ ಪಾಪವನ್ನು ಮರೆಮಾಚಲು ಘಟನಾಂತ್ಯವಾಗಿ ಊರಿಯನನ್ನು ದೂರದಲ್ಲೇ ಕೊಲೆಗೈಯ್ಯುವುದಕ್ಕೆ ಉಪಾಯ ಮಾಡುತ್ತಾನೆ.

ದೇವರು ದಾವೀದನಿಗೆ ಸಾಕಷ್ಟು ಕೊಟ್ಟಿದ್ದರೂ ಆತನು ತನ್ನನ್ನು ಅಷ್ಟು ಕೀಳು ಮಟ್ಟಕ್ಕೆ ಕುಗ್ಗಿಸಿಕೊಂಡದ್ದನ್ನು ನಂಬುವುದಕ್ಕೆ ಬಹಳ ಕಠಿಣವೆನಿಸುತ್ತದೆ. ನಾವು

ಯಾರೇ ಆಗಿರಲಿ ಈ ಕಥೆಯಿಂದ ಯಾವ ಎಚ್ಚರಿಕೆಯನ್ನು ತೆಗೆದುಕೊಳ್ಳಬಹುದು?

**ಸೋಮವಾರ** **ಜುಲೈ 19**

## ಎಚ್ಚರಿಕೆಯ ಕರೆ

ದಾವೀದನ ಕತ್ತಲೆಯ ಕಾಲದ ಜೀವಿತದ ನಡುವೆ ಒಂದು ಒಳ್ಳೆಯ ಸುದ್ದಿ ಇದಾಗಿದೆ: ದೇವರು ತನ್ನ ಪ್ರವಾದಿಯನ್ನು ದಾವೀದನ ಹತ್ತಿರ ಕಳುಹಿಸುತ್ತಾನೆ. ಪ್ರವಾದಿಯಾದ ನಾತಾನನು ಮತ್ತು ದಾವೀದನು ಒಬ್ಬರಿಗೊಬ್ಬರು ಚೆನ್ನಾಗಿ ಗೊತ್ತಿದ್ದವರಾಗಿದ್ದರು. ಇದಕ್ಕೂ ಮುಂಚೆ ನಾತಾನನು ದಾವೀದನಿಗೆ ದೇವಾಲಯದ ಕಟ್ಟಡ ಕಟ್ಟುವುದಕ್ಕೆ ಯೋಜನೆಯನ್ನು ಕೊಟ್ಟಿದ್ದನು (2 ಸಮುವೇಲ 7). ಈವಾಗ ಪ್ರವಾದಿಯು ಭಿನ್ನವಾದ ಇನ್ನೊಂದು ಕಾರ್ಯವನ್ನು ನಿರ್ವಹಿಸಲು ದಾವೀದನ ಹತ್ತಿರ ಬಂದನು. ನಾತಾನನು ನೇರವಾಗಿ ದಾವೀದನು ಮಾಡಿದ ಪಾಪವನ್ನು ಹೇಳಿ ತಕ್ಷಣ ಅವನನ್ನು ಅವಮಾನ ಪಡಿಸದೆ ಒಂದು ಕಥೆಯ ಮೂಲಕ ಅದನ್ನು ತಿಳಿಸುವ ಆಯ್ಕೆ ಮಾಡುತ್ತಾನೆ ಯಾಕೆ?

ನಾತಾನನಿಗೆ ಹೇಗೆ ಹೇಳಬೇಕೆಂಬುದು ಗೊತ್ತಿತ್ತು. ಹಾಗಾಗಿ ದಾವೀದನಿಗೆ ಅರ್ಥವಾಗುವ ರೀತಿಯಲ್ಲಿ ನಾತಾನನು ಹೇಳಿದನು. ಹಿಂದೆ ಕುರಿಕಾಯುತ್ತಿದ್ದ ದಾವೀದನಿಗೆ ಕುರಿಯ ಕಥೆಯೊಂದನ್ನು ಅವನಿಗೆ ಸಂಬಂಧಪಡಿಸಿಕೊಂಡು ಹೇಳಿದನು. ಆತನಿಗೆ ದಾವೀದನಲ್ಲಿದ್ದ ಉನ್ನತಮಟ್ಟದ ನ್ಯಾಯದ ಮತ್ತು ಪ್ರಾಮಾಣಿಕತೆಯ ಪ್ರಜ್ಞೆಯ ಬಗ್ಗೆ ಗೊತ್ತಿತ್ತು. ಹಾಗಾಗಿ ಒಂದು ಅರ್ಥದಲ್ಲಿ, ನಾತಾನನು ಬಲೆಯನ್ನು ಒಡ್ಡಿದನು ಮತ್ತು ದಾವೀದನು ನೇರವಾಗಿ ಆ ಬಲೆಯೊಳಗೆ ನಡೆದನು ಎಂದು ಹೇಳಬಹುದು.

ದಾವೀದನು ತನಗರಿವಿಲ್ಲದೆಯೇ ತನ್ನ ಮರಣದ ಶಿಕ್ಷೆಯನ್ನು ತಾನೆ ಉಚ್ಚರಿಸುತ್ತಾನೆ, ಆವಾಗ ನಾತಾನನು ಆ ಮನುಷ್ಯನು ನೀನೆ ಎಂದು ಅವನಿಗೆ ಹೇಳುತ್ತಾನೆ (2 ಸಮುವೇಲ 12:7). ಆ ಮನುಷ್ಯನು ನೀನೇ ಎಂದು ಬೇರೆ ಬೇರೆ ರೀತಿಯಲ್ಲಿ ಹೇಳಬಹುದು. ಒಬ್ಬನು ಅದನ್ನು ಗಟ್ಟಿಯಾಗಿ ಕೂಗಿ ಹೇಳಬಹುದು, ಒಬ್ಬನು ವ್ಯಕ್ತಿಯ ಮುಖಕ್ಕೆ ಬೆರಳು ಮಾಡಿ ತೋರಿಸುತ್ತಾ ಆರೋಪಮಾಡಬಹುದು ಅಥವಾ ಒಬ್ಬನು ಎಚ್ಚರಿಕೆಯಿಂದ ಕಾಳಜಿಯನ್ನು ವ್ಯಕ್ತಪಡಿಸಬಹುದು. ನಾತಾನನು ಮಾತುಗಳು ಕೃಪೆಯಿಂದ ಬಿಗಿದುಕೊಂಡಿದ್ದವು. ಆ ಸಂದರ್ಭದಲ್ಲಿ ದಾವೀದನಿಗೆ

ದೇವರ ಮಗನೋ ಅಥವಾ ಮಗಳೋ ಗೊತ್ತಾಗಿಯೂ ಆತನ ಚಿತ್ತಕ್ಕೆ ವಿರುದ್ಧವಾಗಿ ನಡೆದುಕೊಂಡಾಗ ದೇವರಿಗಾಗುವ ನೋವು ಎಂಥದ್ದೆಂದು ದಾವೀದನು ಅನುಭವಿಸಿರಬೇಕು. ದಾವೀದನ ಮನಸ್ಸಿಗೆ ಏನೋ ಒಂದು ತಗುಲಿತು. ಅವನ ಹೃದಯವನ್ನು ಯಾವುದೋ ಒಂದು ಛೇದಿಸಿತು.

'ನಾನು ಬತ್ಷೆಬೆಗೆ ವಿರೋಧವಾಗಿ ಪಾಪ ಮಾಡಿದ್ದೇನೆ' ಅಥವಾ 'ನಾನೊಬ್ಬ ಕೊಲೆಗಾರನು' ಎಂದು ಹೇಳಿಕೊಳ್ಳದೆ ದಾವೀದನು 'ನಾನು ದೇವರಿಗೆ ವಿರೋಧವಾಗಿ ಪಾಪ ಮಾಡಿದ್ದೇನೆ' ಎಂದು ಉತ್ತರ ಕೊಡುತ್ತಾನೆ ಏಕೆ? (2 ಸಮುವೇಲ 12:13 ಮತ್ತು ಕೀರ್ತ 51:4ನ್ನು ನೋಡಿರಿ).

ನಮ್ಮ ಹೃದಯದ ನೆಮ್ಮದಿಯನ್ನು ಕೆಡಿಸುವ ಪಾಪವನ್ನು ಪ್ರಾಥಮಿಕವಾಗಿ ನಮ್ಮ ಸೃಷ್ಟಿಕರ್ತನು ವಿಮೋಚಕನು ಆದ ದೇವರಿಗೆ ಬಹಿರಂಗವಾಗಿ ಅಪಮಾನ ಮಾಡುತ್ತದೆ ಎಂದು ದಾವೀದನು ಕಂಡುಕೊಂಡನು. ನಾವು ನಮ್ಮನ್ನು ನೋಯಿಸಿಕೊಳ್ಳುತ್ತೇವೆ ಇತರರಿಗೂ ಅದರ ಪರಿಣಾಮಗಳು ಆಗುತ್ತವೆ. ನಾವು ನಮ್ಮ ಕುಟುಂಬಗಳಿಗೂ ಸಭೆಗಳಿಗೂ ಅವಮಾನವನ್ನು ತರುತ್ತೇವೆ. ಆದಾಗ್ಯೂ ನಾವು ಅಂತಿಮವಾಗಿ ದೇವರನ್ನು ನೋಯಿಸುತ್ತೇವೆ ಮತ್ತು ಗೊಲ್ಗಥನ ಗುಡ್ಡದ ಮೇಲೆ ಲಂಬವಾಗಿ ಪರಲೋಕಕ್ಕೆ ಚಾಚಿಕೊಂಡಿರುವ ಶಿಲುಬೆಗೆ ಮತ್ತೊಂದು ಮೊಳೆಯನ್ನು ಹೊಡೆಯುವವರಾಗಿರುತ್ತೇವೆ.

"ನಾತಾನನ ಗದರಿಕೆಯು ದಾವೀದನ ಹೃದಯವನ್ನು ಸ್ಪರ್ಶಿಸಿತು; ಆತನ ಮನಸ್ಸಾಕ್ಷಿಯು ಜಾಗೃತಗೊಂಡಿತು; ಆತನ ಪಾಪವು ಸಂಪೂರ್ಣವಾಗಿ ಘೋರವಾದ ದುಷ್ಟತನದಲ್ಲಿ ಕಾಣಿಸಿಕೊಂಡಿತು. ಆತನ ಆತ್ಮವು ಅನುತಾಪದಿಂದ ದೇವರ ಮುಂದೆ ಬಾಗಿತು. ಕಂಪಿಸುವ ತುಟಿಗಳಿಂದ ಆತನು. "ನಾನು ದೇವರಿಗೆ ವಿರೋಧವಾಗಿ ಪಾಪ ಮಾಡಿದ್ದೇನೆ" ಎಂದ ಹೇಳಿದನು ನಾವು ಯಾರಿಗೋ ಮಾಡಿದ ಎಲ್ಲಾ ತಪ್ಪುಗಳು ಆ ವ್ಯಕ್ತಿಯಿಂದ ಹಿಂದಿರುಗಿ ದೇವರನ್ನು ಮುಟ್ಟುತ್ತವೆ. ದಾವೀದನು ಊರಿಯನ ಮತ್ತು ಬತ್ಷೆಬೆಯ ವಿರುದ್ಧವಾಗಿ ಘೋರವಾದ ಪಾಪವನ್ನು ಎಸಗಿದ್ದನ್ನು ಅದರ ತೀಕ್ಷ್ಣತೆಯನ್ನು ಅನುಭವಿಸಿದನು. ಆದರೆ ಆತನು ದೇವರ ವಿರುದ್ಧವಾಗಿ ಮಾಡಿದ ಪಾಪವು ಅಪರಿಮಿತವಾಗಿ ದೊಡ್ಡದಾಗಿತ್ತು"– ಎಲೆನ್ ಜಿ ವೈಟಮ್ಮನವರ 'ನಮ್ಮ ಪಿತೃಗಳು ಮತ್ತು ಪ್ರವಾದಿಗಳು' ಪುಸ್ತಕದಲ್ಲಿ 722ನೇ ಪುಟ.

**ಮಂಗಳವಾರ** **ಜುಲೈ 20**

## ಕ್ಷಮಿಸಲ್ಪಡುವುದು ಮತ್ತು ಮರೆತುಕೊಳ್ಳುವುದು

ದಾವೀದನು ತನಗಿರಿವಿಲ್ಲದಂತೆಯೇ ತನ್ನ ಮೇಲೆಯೇ ನ್ಯಾಯತೀರ್ಪನ್ನು ಉಚ್ಚರಿಸಿದ ತರುವಾಯ (2 ಸಮುವೇಲ 12:5–6). ನಾತಾನನು ಅವನ ಪಾಪದ ಘೋರತನಕ್ಕೆ ಎದುರಾಗಿ ನಿಂತನು. ದಾವಿದನ ಹೃದಯವು ಒಡೆಯಿತು ಕೂಡಲೇ ಆತನು ತನ್ನ ಪಾಪವನ್ನು ಅರಿಕೆ ಮಾಡಿದನು. ತಕ್ಷಣವೇ ನಾತಾನನು ಅವನಿಗೆ 'ಯೆಹೋವನು ನಿನ್ನ ಪಾಪವನ್ನು ಕ್ಷಮಿಸಿದ್ದಾನೆ' ಎಂದ ಭರವಸೆ ಕೊಟ್ಟನು (2 ಸಮುವೇಲ 12:13). ಆವಾಗ ದಾವೀದನು ಕ್ಷಮೆಹೊಂದಿದನು. ದೇವರ ಕ್ಷಮಾಪಣೆಗೆ ಯಾವಾಗಲೂ ಕಾಯಬೇಕಾದ ಕಾಲವೆಂಬುದಿಲ್ಲ. ದಾವೀದನು ಕ್ಷಮಾಪಣೆಗೆ ನಿಜವಾಗಿಯೂ ಪ್ರಾಮಾಣಿಕನಾಗಿದ್ದನು ಎಂಬುದನ್ನು ಆತನು ಸಾಬೀತು ಮಾಡಿ ತೋರಿಸುವ ಅಗತ್ಯವಿಲ್ಲ. ಈಗಾಗಲೇ ದಾವೀದನು ಮಾಡಿದ ಪಾಪದ ಫಲಗಳನ್ನು ಮುಂತಿಳಿಸಿದ ನಾತಾನು ಮುಂದುವರೆಯುತ್ತಾ ನಿನ್ನಿಂದ ಹುಟ್ಟಿರುವ ಮಗು ಸತ್ತೇ ಹೋಗುವುದು ಎಂದು ಹೇಳಿದನು (2 ಸಮುವೇಲ 12:10–23).

ದೇವರು ದಾವೀದನ ಪಾಪಗಳನ್ನು ತೆಗೆದುಹಾಕಿದನು ಎಂಬುದಕ್ಕೆ ಅರ್ಥವೇನು? ಆತನು ಕೇವಲ ಅವನ ಪಾಪದ ಹಲಗೆಯನ್ನು ಅಳಿಸಿ ಶುದ್ಧ ಮಾಡಿದನೇ? ಪ್ರತಿಯೊಬ್ಬರು ಅದರ ಬಗ್ಗೆ ಸುಮ್ಮನೆ ಮರೆತುಬಿಡುವರೇ? 2 ಸಮುವೇಲ 12:10–23 ಓದಿರಿ.

ಈ ಪ್ರಶ್ನೆಗಳ ದೆಸೆಯಿಂದ ದಾವೀದನಿಗೂ ಸಹಾ ವಿಸ್ಮಯವಾಗಬಹುದು. ಅವನ ಲೋಕವು ಕುಸಿಯುವನ್ನು ನೋಡಿದನು. ಅವನ ಮಗು ಸತ್ತಿತು ಅವನ ಕುಟುಂಬದಲ್ಲಿ ಕ್ರಮ ತಪ್ಪಿಹೋಯಿತು (ಅಮ್ನೋನನು ಮತ್ತು ಅಬ್ಷಾಲೋಮನ ಉದಾಹರಣೆಗಳು ನಿಜಜೀವನದಲ್ಲಿ ಕುಟುಂಬ ಸಮಸ್ಯೆಗಳನ್ನು ಎತ್ತಿ ತೋರಿಸುತ್ತವೆ) ಮತ್ತು ಅವನ ಭವಿಷ್ಯವು ಅನಿಶ್ಚಿತವಾಗಿತ್ತು. ಆದಾಗ್ಯೂ ಅವನ ಪಾಪದ ದೆಸೆಯಿಂದ ನಿರಪರಾಧಿಗಳಾದ ಊರಿಯ ಮತ್ತು ಹುಟ್ಟಿದ ಕೂಸಿನ ಮೇಲೆ ಕೆಟ್ಟ ಪರಿಣಾಮ–ಗಳಾಗಿದ್ದವು. ದೇವರ ಕೃಪೆಯು ಒಂದು ದಿನ ಈ ಪಾಪದ ಫಲಿತಾಂಶಗಳನ್ನು ತೆಗೆದುಬಿಡುತ್ತವೆ ಎಂಬುದಾಗಿ ದಾವೀದನು ತಿಳಿದುಕೊಂಡನು. ಏತನ್ಮಧ್ಯೆ ಕಲಕಿಹೋದ ಆತ್ಮಸಾಕ್ಷಿಗೆ ದಾವೀದನು ದೇವರಕೃಪೆಯಿಂದ ವಿಶ್ರಾಂತಿ ಕಂಡುಕೊಂಡನು.

ದಾವೀದನು ತನಗೆ ನಿಜವಾಗಿಯೂ ಏನು ಅಗತ್ಯವೆಂದು ಭಾವಿಸಿದನು? ಆತನು ಯಾತಕ್ಕೋಸ್ಕರ ಹಂಬಲಿಸಿದನು? ಕೀರ್ತನೆಗಳು 51:1–6 ವಚನಗಳನ್ನು ಓದಿರಿ.

ದಾವಿದನು ತನ್ನ ಹೃದಯವನ್ನು ತೆರೆದು 51ನೇ ಕೀರ್ತನೆಯಿಂದ ತನ್ನ ಪಾಪಗಳನ್ನು ಅರಿಕೆ ಮಾಡಿದನು. ಕರುಣೆಗಾಗಿ ದಾವೀದನು ಮಾಡಿದ ಮನವಿಯು ದೇವರ ಪ್ರೀತಿಗೂ ಆತನ ಮಹಾಅನುಕಂಪಕ್ಕೂ ಹಿಡಿಸಿತು. ಆತನು ಹೊಸತನಕ್ಕೆ ಹಂಬಲಿಸಿದನು. ನಾವು ಯೇಸುಕ್ರಿಸ್ತನಲ್ಲಿ ಸಿಗುವ ವಿಶ್ರಾಂತಿಯ ಬೆಲೆಯನ್ನು ಪರಿಗಣಿಸುವಾಗ ನಮಗೆ ಮೊಟ್ಟ ಮೊದಲಿಗೆ ನಮಗಿರುವ ಹೊರಗಿನ ಸಹಾಯವನ್ನು ಕೊಂಡುಕೊಳ್ಳಬೇಕು; ನಾವು ಪಾಪಿಗಳು ನಮಗೆ ರಕ್ಷಕನು ಬೇಕು ನಾವು ನಮ್ಮ ಪಾಪಗಳನ್ನು ಅರ್ತುಕೊಂಡಿದ್ದೇವೆ. ಅವುಗಳನ್ನು ಅಳಿಸಿ ಹಾಕುವವನಿಗೋಸ್ಕರ ದೊರೆ ಇಡುತ್ತೇವೆ. ನಮ್ಮನ್ನು ಶುದ್ಧಪಡಿಸು, ನಮ್ಮನ್ನು ನೂತನ ಪಡಿಸು. ನಾವು ಇದನ್ನು ಮಾಡಿದಾಗ ನಾವು ಧೈರ್ಯವನ್ನು ಹೊಂದಬಹುದು. ಇಲ್ಲೊಬ್ಬ ವ್ಯಭಿಚಾರಿ ಇದ್ದಾನೆ, ಒಬ್ಬ ಕೊಲೆಗಾರ, ಒಬ್ಬ ಮೋಸಗಾರ ಮತ್ತು ಹತ್ತು ಕಟ್ಟಳೆಗಳಲ್ಲಿ ಐದನ್ನು ಮೀರಿರುವವನೊಬ್ಬನಿದ್ದಾನೆ ಆತನು ಸಹಾಯವನ್ನು ಕೇಳುತ್ತಾನೆ. ದೇವರ ಕ್ಷಮಾಪಣೆಯ ವಾಗ್ದಾನವನ್ನು ಬಾಧ್ಯವಾಗಿ ಹೊಂದುತ್ತಾನೆ.

ದೇವರು ದಾವೀದನು ಮಾಡಿದ ಪಾಪವನ್ನು ಕ್ಷಮಿಸುವುದಾದರೆ ನಿಮಗೆ ಯಾವ ನಿರೀಕ್ಷೆ ಇರುತ್ತದೆ?

**ಬುಧವಾರ** **ಜುಲೈ 21**

## ಏನೋ ಒಂದು ಹೊಸದು

ದಾವೀದನು ತನ್ನ ಪಾಪವನ್ನು ಯಾವುದೇ ನೆಪಹಾಕುವುದಕ್ಕೆ ಅಥವಾ ನಯಗೊಳಿಸುವುದಕ್ಕೆ ಪ್ರಯತ್ನ ಪಡದೆ ಅರಿಕೆ ಮಾಡಿದ ನಂತರ ದೇವರಿಗೆ ಮನವಿ ಮಾಡುತ್ತಾನೆ. ಆತನು ದೇವರನ್ನು ಯಾತಕ್ಕಾಗಿ ಕೇಳಿಕೊಂಡನು? ಕೀರ್ತ 51:7–12 ವಚನಗಳನ್ನು ಓದಿರಿ.

ದಾವೀದನು ತನ್ನನ್ನು ಹಿಸೋಪ್‌ಗಿಡದ ಬರಲಿನಿಂದ ನೀರನ್ನು ಚಿಮಿಕಿಸಿಯೋ ಎಂಬಂತೆ ನನ್ನ ಅಶುದ್ಧತ್ವವನ್ನು ತೆಗೆದುಬಿಡು ಎನ್ನುತ್ತಾನೆ, ದೇವದರ್ಶನದ ಗುಡಾರವನ್ನು ದರ್ಶಿಸುವ ಇಸ್ರಾಯೇಲ್ಯರಿಗೆ ಈ ಪದದ ಅರ್ಥವು ತಿಳಿದಿತ್ತು.

ಮೋಶೆಯ ಧರ್ಮಶಾಸ್ತ್ರ ನೇಮಿಸಿರುವ ಶುದ್ಧಾಚಾರವನ್ನು ಇದು ಉದಾಹರಿಸುತ್ತದೆ, ಆತನು ಯಜ್ಞದ ಮಹತ್ವವನ್ನು ತಿಳಿದಿದ್ದನು. ಮುಂದೆ ಲೋಕದ ಪಾಪದ್ರೋಹಗಳನ್ನು ಅಳಿಸಲು ಯಾರು ಯಜ್ಞದ ಕುರಿಯಾಗುತ್ತಾನೆ ಎಂಬುದನ್ನು ಗುರುತಿಸಿದ್ದನು.

ದಾವೀದನು ನನ್ನಲ್ಲಿ ಸಂಭ್ರಮೋತ್ಸವದ ಧ್ವನಿಯುಂಟಾಗುವಂತೆ ಮಾಡು ಎಂತಲೂ ದೇವರನ್ನು ಕೇಳತೊಡಗುತ್ತಾನೆ. ತಾನು ಎಸಗಿದ ಪಾಪದ ಘೋರತೆಯಲ್ಲೂ ಸಂತೋಷಕೊಡು ಎಂದು ಕೇಳುವುದು ಆತನ ಧೈರ್ಯವನ್ನು ಸೂಚಿಸುತ್ತದೆಯಲ್ಲವೆ?

ಬಹುಶಃ ಈ ಭಾವಾನುವಾದವನ್ನು ಆಲಿಸುವುದು ನಿಮಗೆ ಉಪಯುಕ್ತವಾಗ–ಬಹುದು: ನಾನು ಕ್ಷಮಿಸಲ್ಪಟ್ಟಿದ್ದರೆ ಹೇಳು, ಹಾಗಾದರೆ ನಾನು ನಿನ್ನ ದರ್ಶನದ ಗುಡಾರವನ್ನು ಪುನಃ ಹೊಕ್ಕು ನಿನ್ನ ಆರಾಧನೆಯ ಸಂತೋಷ ಮತ್ತು ಸಂಭ್ರಮಗಳನ್ನು ಕೇಳಿಸಿಕೊಳ್ಳುತ್ತೇನೆ".

ಆದಾಮ ಮತ್ತು ಹವ್ವಳು ಪಾಪಮಾಡಿದಾಗ ಅವರು ದೇವರ ಸನ್ನಿಧಿಯಿಂದ ಮರೆಯಾಗಲು ಪ್ರಯತ್ನಿಸಿದರು (ಆ.ಕಾಂಡ 3:8). ತಾನು ಪಾಪವೆಸಗಿದ ಮೇಲೂ ದಾವೀದನು ಹೀಗೆ ದೇವರನ್ನು ಬೇಡುವುದು ಹೇಗೆ ಭಿನ್ನವಾಗಿದೆ ಎಂದು ಆಲೋಚಿಸುವಿರಿ? ಕೀರ್ತನೆ 51:11,12ನ್ನು ಓದಿರಿ.

ದಾವೀದವನಿಗೆ ದೇವರ ಸಮ್ಮುಖದಲ್ಲಿ ವಾಸಿಸುವ ಪ್ರಜ್ಞೆಯನ್ನು ಕಳೆದುಕೊಳ್ಳುವ ಇಷ್ಟವಿರಲಿಲ್ಲ. ಪರಿಶುದ್ಧಾತ್ಮನು ಇಲ್ಲದೆ ಹೋದರೆ ತಾನೊಬ್ಬ ಬಲಹೀನನು ಎಂಬುದನ್ನು ಮನಗಂಡನು. ದಾವೀದನು ಬತ್ಷಬೆಯ ಜೊತೆ ಬಹಳ ಸುಲಭವಾಗಿ ಪಾಪಕ್ಕೆ ಬಿದ್ದನು. ಆದುದರಿಂದ ಮುಂದೆಯೂ ಹಾಗೆಯೇ ಪಾಪದಲ್ಲಿ ಜಾರಿ ಬಿಡುತ್ತೇನೆ ಎಂಬುದು ಆತನಿಗೆ ಗೊತ್ತಿತ್ತು. ಆತನಿಗೆ ತನ್ನ ಮೇಲಿದ್ದ ವಿಶ್ವಾಸವು ನುಚ್ಚಾಯಿತು. ದಾವೀದನು ತನಗೆ ಮುಂದೆ ಬರುವ ಯಶಸ್ಸುಗಳು ತನ್ನಿಂದ ಬರುವುದಿಲ್ಲವೆಂದು, ಅದು ಸಿಗುವುದು ಸಂಪೂರ್ಣವಾಗಿ ದೇವರ ಮೇಲೆ ಆತುಕೊಳ್ಳುವುದರಿಂದ ಎಂಬುದನ್ನು ಅರ್ಥಮಾಡಿಕೊಂಡನು.

ಕ್ರೈಸ್ತೀಯ ಯಶಸ್ಸಿನ ಜೀವನ ನಮ್ಮದೇನೂ ಇರುವುದಿಲ್ಲ, ಇರುವುದೆಲ್ಲಾ ಯೇಸುಕ್ರಿಸ್ತನದೆ. ನಾವು ಆತನ ಪ್ರಸನ್ನತೆಗೆ ಹಂಬಲಿಸುತ್ತೇವೆ; ಆತನ ಆತ್ಮಕ್ಕಾಗಿ

ಬಯಸುತ್ತೇವೆ; ನಮಗೆ ಆತನ ರಕ್ಷಣೆಯಾನಂದವುಬೇಕು. ನಾವು ಆತನಿಂದ ದೊರಕುವ ಮರುಸೃಷ್ಟಿ ಮತ್ತು ಪುನರುಜ್ಜೀವನದ ಅಗತ್ಯತೆಯನ್ನು ಮನಗಂಡಿದ್ದೇವೆ. ನಮಗೆ ಆತನ ವಿಶ್ರಾಂತಿಯು ಬೇಕಾಗಿದೆ– ಅದು ದೈವೀಕ ಮರುಸೃಷ್ಟಿಯ ಕಾರ್ಯವಾಗಿದೆ. ವಿಶ್ರಾಂತಿಯ ಮರುಸೃಷ್ಟಿಯು ಕ್ಷಮಾಪಣೆಗೆ ದೂರವಾದುದಲ್ಲ. "ದೇವರೇ, ನನ್ನಲ್ಲಿ ಶುದ್ಧಹೃದಯವನ್ನು ನಿರ್ಮಿಸು; ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನ ಪಡಿಸು" (ಕೀರ್ತ 51:10,11) ಎಂದು ಮರುಸೃಷ್ಟಿಯ ಪರಿಭಾಷೆಯನ್ನು ಉಪಯೋಗಿಸುತ್ತದೆ. ಸೃಷ್ಟಿಕಾರ್ಯವನ್ನು ಆದಿಯಲ್ಲಿ ಮಾಡಿದನು ಎಂಬುದನ್ನು ಹಳೆಯ ಒಡಂಬಡಿಕೆಯಲ್ಲಿ ಕಾಣುತ್ತೇವೆ. ನಾವು ಒಮ್ಮೆ ಮರುಸೃಷ್ಟಿಗೊಂಡರೆ ನಾವು ವಿಶ್ರಾಂತಿ ಹೊಂದಬಹುದು.

ನೀವು ನಿಮ್ಮ ಪಾಪಪ್ರಜ್ಞೆಯಿಂದ ಬಿಡುಗಡೆ ಹೊಂದಿ ಸಂತೋಷ ಸಂಭ್ರಮಗಳನ್ನು ಅನುಭವಿಸದೇ ಹೋಗಿದ್ದರೆ ನಿಮ್ಮನ್ನು ಹಾಗೆ ತಡೆದು ಹಿಡಿದುಕೊಂಡಿರುವುದು ಯಾವುದು? ಅದು ಪಾಪಪ್ರಜ್ಞೆಯಾಗಿದ್ದರೆ ನಿಮಗೆ ಈ ಕಥೆಯಿಂದ ಕಲಿಯುವುದು ಹೇಗೆ ಸಹಾಯ ಮಾಡುತ್ತದೆ?

**ಗುರುವಾರ** **ಜುಲೈ 22**

## ದೇವರ ಬೆಳಕನ್ನು ಪ್ರತಿಫಲಿಸುವವರು

ನಾವು ಯಾವುದಾದರೊಂದು ಕೆಲಸವನ್ನು ಮಾಡುವುದಕ್ಕೆ ತೊಡಗಿ ಅದರಿಂದ ಮುಜುಗರವಾಗುವಷ್ಟು ಸೋಲನ್ನು ಕಂಡು ಅದಕ್ಕೆ ಕ್ಷಮಾಪಣೆಯನ್ನು ಅನುಭವಿಸದ ಮೇಲೆ ಬಹುಶಃ ಅದನ್ನು ಮರೆತುಬಿಡುವ ಪ್ರಯತ್ನ ಮಾಡುವುದೇ ಹೆಚ್ಚು ಸ್ವಾಭಾವಿಕವಾದುದಾಗಿದೆ. ನಮಗಾದ ಸೋಲಿನ ನೆನಪುಗಳು ನಮಗೆ ನೋವು ಕೊಡುತ್ತವೆ. ದಾವೀದನು ತನ್ನ ನೋವಿನ ಅನುಭವದಿಂದ ಏನು ಮಾಡಬೇಕೆಂದು ಕೊಂಡನು? ಕೀರ್ತನೆ 51:13–19 ವಚನಗಳನ್ನು ಓದಿರಿ.

ಪಿಂಗಾಣಿಯಿಂದ ಮಾಡಿದ ಒಂದು ಬಟ್ಟಲು ಅಥವಾ ಬೆಲೆಬಾಳುವ ಹೂದಾನಿಯು ಕೈತಪ್ಪಿ ಬಿದ್ದರೆ ಒಡೆದು ಚೂರುಚೂರಾಗುತ್ತದೆ, ಆವಾಗ ನಾವು ಸಾಮಾನ್ಯವಾಗಿ ಬೇಸರಪಟ್ಟುಕೊಂಡು ನಿಟ್ಟುಸಿರುಬಿಟ್ಟು. ಆ ಚೂರುಗಳು ಯಾವ ಕೆಲಸಕ್ಕೂ ಬಾರದಿರುವುದರಿಂದ ಅವುಗಳನ್ನು ಬೀಸಾಡುತ್ತೇವೆ. ಆದರೆ ಜಪಾನ್ ದೇಶದಲ್ಲಿ 'ಕಿಷ್ಟುಗಿ' ಎಂಬ ಸಾಂಪ್ರದಾಯಿಕ ಕಲೆ ಆಚರಣೆಯಲ್ಲಿದೆ. ಅದು ಮುರಿದು

ಹೋದ ಪಿಂಗಾಣಿ ವಸ್ತುಗಳಿಗೆ ಮರುರೂಪಕೊಡುವ ಕೌಶಲ್ಯದ ಕಲೆಯಾಗಿದೆ. ಒಡೆದುಹೋದ ಚೂರುಗಳನ್ನು ಒಂದಾಗಿ ಅಂಟಿಸಲು ಚಿನ್ನದ ಅಥವಾ ಬೆಳ್ಳಿಯ ದ್ರವವನ್ನು ಅಂಟಿನಂತೆ ಉಪಯೋಗಿಸಿ ಅದನ್ನು ಸುಂದರವಾದ ಮತ್ತು ಬೆಲೆ ಬಾಳುವಂತಹ ವಸ್ತುವನ್ನಾಗಿ ಮಾಡುತ್ತಾರೆ.

ದೇವರು ನಮ್ಮ ಪಾಪಗಳನ್ನು ಕ್ಷಮಿಸುವಾಗಲೆಲ್ಲ ಆತನು ನಮ್ಮನ್ನು ಮರುಸೃಷ್ಟಿ ಮಾಡುತ್ತಾನೆ. ಆವಾಗ ನಮ್ಮಲ್ಲಿ ಏನಾದರೊಂದು ಬದಲಾವಣೆ ಆಗಿರುತ್ತದೆ. ದೇವರ ಅಮೂಲ್ಯವಾದ ಕ್ಷಮಾಪಣೆಯು ನಮ್ಮ ಒಡಕನ್ನು ಒಂದಾಗಿ ಅಂಟಿಸುತ್ತದೆ ಮತ್ತು ಆ ಒಡಕುಗಳು ಆತನ ಕೃಪೆಯನ್ನು ತನ್ನ ಕಡೆಗೆ ಮತ್ತೆ ಸೆಳೆಯುತ್ತಿರುತ್ತವೆ. ನಾವು ದೇವರಿಗೆ 'ಧ್ವನಿವರ್ಧಕಗಳಂತೆ' ಕೆಲಸ ಮಾಡಬಹುದು. "ನನ್ನ ನಾಲಿಗೆಯು ಉತ್ಸಾಹದಿಂದ ನಿನ ಸತ್ಯಸಂಧತೆಯನ್ನು ಕೊಂಡಾಡುವುದು" (ಕೀರ್ತ 51:14). ನಾವು ಯಾವಾಗಲೂ ನಮ್ಮ ಸ್ವಬುದ್ಧಿಯಿಂದ ನಮ್ಮನ್ನು ತಿದ್ದಿಕೊಳ್ಳುವ, ಸುಧಾರಣೆ ಮಾಡಿಕೊಳ್ಳುವ ಪ್ರಯತ್ನ ಮಾಡಬಾರದು. ನಮ್ಮ ಮುರಿದ ಮನಸ್ಸು, ಪಶ್ಚಾತ್ತಾಪ ಪಡುವ ಹೃದಯಗಳು ದೇವರಿಗೆ ಸಾಕಷ್ಟು ಸ್ತೋತ್ರ ಮಾಡುವವು. ಅವು ನಮ್ಮ ಸುತ್ತವಿರುವವರು ನಮ್ಮಲ್ಲಿ ನೋಡುವಂತಹ ಬೆಳಕಿನ ಕಿರಣಗಳಾಗಿರುತ್ತವೆ. ನಮ್ಮ ಕ್ಷಮಾಪಣೆಯ ಹೊಂದಿದ ಅನುಭವವು ಕ್ಷಮಾಪಣೆಗಾಗಿ ಹುಡುಕುವ ಇತರರನ್ನು ಆಕರ್ಷಿಸುತ್ತದೆ.

ಕೀರ್ತನೆಗಳು 51 ಮತ್ತು 1 ಯೋಹಾನ 1:9ರ ಮಧ್ಯೆ ಏನು ಸಂಬಂಧವಿದೆ? 1 ಯೋಹಾನ 1:9 ಕೀರ್ತನೆ 51ರ ಸಂಕ್ಷಿಪ್ತ ಸಾರಾಂಶವಾಗಿದೆ. "ದೇವರೇ, ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವುದಿಲ್ಲನೆಂದು ದಾವೀದನಿಗೆ ತಿಳಿದಿರುವಂತೆ ಯೋಹಾನನು ಸಹಾ ಖಾತ್ರಿಯಾಗಿ "ನನ್ನ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನು. ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು" ಎಂದು ಹೇಳುತ್ತಾನೆ (1 ಯೋಹಾನ 1:9). ನಾವು ದೇವರನ್ನು ಆತನ ಮಾತುಗಳಿಂದ ತೆಗೆದುಕೊಳ್ಳಬಹುದು.

ದಾವೀದನು ತನ್ನ ಕೃತ್ಯಗಳಿಂದಲೂ ಉದಾಹರಣೆಗಳಿಂದಲೂ ತನ್ನ ಕುಟುಂಬಕ್ಕೆ ಮಾಡಿದ ಭಯಂಕರ ಹಾನಿಯನ್ನು ಮತ್ತೆ ಸರಿಪಡಿಸಿಕೊಳ್ಳಲು ಸಾಧ್ಯವಾಗಲೇ

ಇಲ್ಲ. ಆತನು ತನ್ನ ನಿರ್ಧಾರಗಳಿಂದಲೂ ಕೃತ್ಯಗಳ ದೆಸೆಯಿಂದಲೂ ಸಾಕಾಷ್ಟು ಪ್ರತಿಫಲಗಳನ್ನು ಅನುಭವಿಸಿದನು. ಆದಾಗ್ಯೂ ದಾವೀದನಿಗೆ ಗೊತ್ತಿತ್ತು ತಾನು ಕ್ಷಮಿಸಲ್ಪಟ್ಟಿದ್ದೇನೆಂದು ಒಂದು ದಿನ ದೇವರ ಯಜ್ಞದ ಕುರಿಯಾದ ಯೇಸುಕ್ರಿಸ್ತನು ಒಂದು ತನ್ನ ಸ್ಥಳದಲ್ಲಿ ನಿಂತುಕೊಳ್ಳುತ್ತಾನೆಂದು ಆತನು ನಂಬಿಕೆಯಿಂದ ತಿಳಿದುಕೊಂಡಿದ್ದನು.

ಯೋಹಾನನು ಹೇಳಿರುವ ವಾಗ್ದಾನವನ್ನು (1 ಯೋಹಾನ 1:9). ನಿಮ್ಮ ಸ್ವಂತ ಜೀವನಕ್ಕೆ ಈಗಲೇ ಅನ್ವಯಿಸಿಕೊಳ್ಳುವುದನ್ನು ಹೇಗೆ ಕಲಿಯ ಬಲ್ಲಿರಿ? ಈ ವಾಗ್ದಾನವು ನಿಮಗೂ ಸಹ ಕೊಡಲ್ಪಟ್ಟಿದೆ ಎಂದು ತಿಳಿದಾಗ ನಿಮಗೆ ಯಾನ ಭಾವನೆಯಾಗುತ್ತದೆ?

**ಶುಕ್ರವಾರ** **ಜುಲೈ 23**

**ಹೆಚ್ಚಿನ ಚಿಂತನೆ :** ದಾವೀದನ ಪಶ್ಚಾತ್ತಾಪವು ನಿಜವಾಗಿಯೂ ಆಳವಾಗಿಯೂ ಇತ್ತು. ಆತನು ತನ್ನ ಅಪರಾಧವನ್ನು ಶಮನ ಮಾಡಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ಅವನಲ್ಲಿ ಹುಟ್ಟಿದ ಪ್ರಾರ್ಥನೆಯಲ್ಲಿ ನ್ಯಾಯತೀರ್ಪಿನ ಬೆದರಿಕೆಯಿಂದ ಪಾರಾಗಬೇಕು ಎಂಬ ಆಸೆಯಿರಲಿಲ್ಲ.... ಆತನು ತನ್ನ ಆತ್ಮದ ಹೊಲಸನ್ನು ನೋಡಿದನು; ಆತನು ತನ್ನ ಪಾಪಕ್ಕೆ ಅಸಹ್ಯಪಟ್ಟುಕೊಂಡನು. ಆತನು ಪ್ರಾರ್ಥಿಸಿದುದು ಕೇವಲ ಕ್ಷಮಾಪಣೆಗೆ ಮಾತ್ರವಲ್ಲ. ತನ್ನ ಹೃದಯದ ಶುದ್ಧತೆಗೆ ಪ್ರಾರ್ಥಿಸಿದನು. ಪಶ್ಚಾತ್ತಾಪಪಟ್ಟ ಪಾಪಿಗಳಿಗೆ ದೇವರು ಮಾಡಿರುವ ವಾಗ್ದಾನಗಳಲ್ಲಿ ತಾನು ಕ್ಷಮಾಪಣೆ ಹೊಂದಿಕೊಂಡುದಕ್ಕೆ ಮತ್ತು ಅಂಗೀಕಾರವಾದದ್ದಕ್ಕೆ ಪುರಾವೆಗಳನ್ನು (ಸಾಕ್ಷಿ) ಕಂಡುಕೊಂಡನು.

ನಿನಗೆ ಯಜ್ಞಗಳಲ್ಲಿ ಅಪೇಕ್ಷೆಯಿಲ್ಲ. ಇದ್ದರೆ ಸಮರ್ಪಿಸೇನು; ಸರ್ವಾಂಗ ಹೋಮಗಳಲ್ಲಿ ನಿನಗೆ ಸಂತೋಷವಿಲ್ಲ. ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟ ಯಜ್ಞ. ದೇವರೇ ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವುದಿಲ್ಲ' ಕೀರ್ತನೆ 51:16,17.

ದಾವೀದನು ಬಿದ್ದುಹೋದರೂ ಕರ್ತನು ಅವನನ್ನು ಮೇಲೆತ್ತಿದನು.... ದಾವೀದನು ತನ್ನನ್ನು ತಾನು ತಗ್ಗಿಸಿಕೊಂಡು ತನ್ನ ಪಾಪಗಳನ್ನು ದೇವರಿಗೆ ಅರಿಕೆ ಮಾಡಿದನು, ಆದರೆ ಸೌಲನು ದಂಡನೆಯನ್ನು ತಿರಸ್ಕರಿಸಿ ತನ್ನ ಹೃದಯುದಲ್ಲಿ ಪಶ್ಚಾತ್ತಾಪ ಪಡದೆ ಅದನ್ನು ಕಠಿಣಪಡಿಸಿಕೊಂಡನು.

ದಾವೀದನ ಚರಿತ್ರೆಯನ್ನು ಹೇಳುವ ಈ ವಾಕ್ಯಗಳಲ್ಲಿ ಮಾನವತೆಯು ಶೋಧನೆಗಳಿಂದಲೂ ಕಷ್ಟ ಹೋರಾಟಗಳಿಂದಲೂ ತುಂಬಿರುವ ಬಲವಾದ ಒಂದು ನಿದರ್ಶನವು ಕೊಡಲ್ಪಟ್ಟಿದೆ. ಎಲ್ಲಾ ಕಾಲದ ಜನರಲ್ಲಿ. ಪಾಪದಿಂದ ದ್ರೋಹಿಗಳಾದ ಸಾವಿರ ಸಾವಿರ ದೇವರ ಮಕ್ಕಳು ದಾವೀದನ ಪ್ರಾಮಾಣಿಕವಾದ ಪಶ್ಚಾತ್ತಾಪ ಮತ್ತು ಪಾಪದ ಅರಿಕೆಯನ್ನು ನೆನಪಿಸಿಕೊಳ್ಳುತ್ತಾರೆ.... ಮತ್ತೆ ಧೈರ್ಯತಂದುಕೊಂಡು ದೇವರ ಆಜ್ಞೆಗಳ ಪ್ರಕಾರ ಆತನ ಮಾರ್ಗದಲ್ಲಿ ತಿರುಗಿ ನಡೆದುಕೊಳ್ಳಲು ಪ್ರಯತ್ನಿಸುತ್ತಾರೆ.

ಯಾರೇ ಆಗಲಿ ತನ್ನ ಆತ್ಮವನ್ನು ಕುಂದಿಸಿಕೊಂಡು ದಾವೀದನಂತೆ ಪಶ್ಚಾತ್ತಾಪ ಪಟ್ಟು ಪಾಪಗಳನ್ನು ಅರಿಕೆ ಮಾಡಿದರೆ ಆತನಿಗೆ ಖಂಡಿತವಾಗಿಯೂ ನಿರೀಕ್ಷೆ ಇರುತ್ತದೆ... ಕರ್ತನು ಪ್ರಾಮಾಣಿಕನಾಗಿ ಪಶ್ಚಾತ್ತಾಪಪಟ್ಟ ಆತ್ಮವನ್ನು ಎಂದಿಗೂ ತಿರಸ್ಕರಿಸುವುದಿಲ್ಲ"– ಎಲೆನ್ ಜಿ ವೈಟಮ್ಮನವರ ನಮ್ಮ ಪಿತೃಗಳು ಮತ್ತು ಪ್ರವಾದಿಗಳು ಎಂಬ ಪುಸ್ತಕದಲ್ಲಿ ಪುಟ 725 ಮತ್ತು ಪುಟ 726.

## ಚರ್ಚಿಸಬೇಕಾದ ಪ್ರಶ್ನೆಗಳು

1. ನಮ್ಮ ಸ್ವಭಾವದಲ್ಲಿ ಅಂತರ್ಗತವಾಗಿರುವ ಪಾಪ ಮತ್ತು ಅದಕ್ಕೆ ಅಗತ್ಯವಾಗಿರುವ ಕ್ಷಮಾಪಣೆಗೆ ಸಮತೋಲನವನ್ನು ಹೇಗೆ ಕಂಡುಕೊಳ್ಳಬಹುದು? ಅದೇ ಸಂದರ್ಭದಲ್ಲಿ ನಮ್ಮ ಪಾಪಗಳಿಂದ ಕ್ಷಮೀಸಲ್ಪಟ್ಟವರಾಗಿ ರಾಜಾದಿರಾಜನಾದ ದೇವರ ಪುತ್ರ ಪುತ್ರಿಯರಂತೆ ಜೀವಿಸುವುದು ಹೇಗೆ?

2. ಯಾಕೆ ಜನರು ಮಾಡಿದ ಪಾಪಗಳೆಲ್ಲವೂ ಅಂತಿಮವಾಗಿ ದೇವರ ವಿರುದ್ಧವಾಗಿ ಮಾಡಿದ ಪಾಪಗಳಾಗಿವೆ? ದೇವರ ವಿರುದ್ಧ ಮಾಡಿದ ಪಾಪವೆಂದರೆ ಏನು?

3. ನಿರಪರಾಧಿಗಳಾದ ಉರಿಯುವಂತೆ, ಸತ್ತುಹೋದ ದಾವೀದನ ಮಗುವಿನಂತೆ, ಒತ್ಷೆಬೆಯಂತೆ,ಕ್ರೈಸ್ತ ವಿಶ್ವಾಸಿಯಲ್ಲದ ಯಾವುದಾದರೂ ವ್ಯಕ್ತಿಯು ಕಷ್ಟ ಸಂಕಟಗಳಲ್ಲಿ ಹೋರಾಡುತ್ತಿದ್ದರೆ ಅವರಿಗೆ ಏನು ಹೇಳಬಲ್ಲಿರಿ? ಅಂತಹ ಸಂದರ್ಭದಲ್ಲಿ ದೇವರ ಪ್ರೀತಿ ಮತ್ತು ನ್ಯಾಯದ ಬಗ್ಗೆ ಹೇಗೆ ವಿವರಿಸುವಿರಿ? ಮಹಾಹೋರಾಟದಲ್ಲಿ ಸಿಗುವ ಯಥಾ ದೃಷ್ಟಿಯು ನಮಗೆ ಸಮಾಧಾನವನ್ನು ಕೊಡುತ್ತದೆ ಹೇಗೆ?

4. ದೇವರು ಸತ್ಯವೇದದಲ್ಲಿ ದಾವೀದನನು ಬತ್ಷಬೆಯ ಜೊತೆ ನಡೆಸಿದ ನೀಚ ಕೃತ್ಯಗಳ ಕಥೆಗೆ ಎರಡು ಪೂರ್ಣ ಅಧ್ಯಾಯಗಳನ್ನು ಮೀಸಲಿಟ್ಟಿದ್ದಾನೆ ಏಕೆ? ಈ ಕಥೆಯನ್ನು ಮತ್ತೆ ಪರಿಗಣಿಸುವುದರಿಂದ ಉದ್ದೇಶವನ್ನು ಯಾವ ಉದ್ದೇಶ ನೆರವೇರುತ್ತದೆ?

5. ಕೀರ್ತನೆ 51:11,12ನೇ ವಚನಗಳಲ್ಲಿ ವ್ಯಕ್ತವಾಗಿರುವ ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ ಎಂಬ ಆಲೋಚನೆಯನ್ನು ಧ್ಯಾನಿಸಿರಿ. ಇದು ಹೇಗಾಗುತ್ತದೆ ಎಂಬುದಕ್ಕೆ ನಿಮ್ಮ ಸ್ವಂತ ಅನುಭವವೇನು? ಮತ್ತೊಬ್ಬರಿಗೆ ಈ ಅಗಲಿಕೆಯ ಹೇಗನ್ನಿಸುತ್ತದೆ ಮತ್ತು ಅಸಹನೀಯ ಎಂಬುದನ್ನು ಮತ್ತೊಬ್ಬರಿಗೆ ಹೇಗೆ ವಿವರಿಸುವಿರಿ? ಯಾಕೆ ಕೃಪೆಯ ವಾಗ್ದಾನ ಮಾತ್ರ ಇದಕ್ಕೆ ಒಂದೇ ಪರಿಹಾರವಾಗಿದೆ?